ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಜಿಲ್ಲಾ ಪಂಚಾಯಿತಿ ಕಟ್ಟಡ, ಜ್ಯೋತಿ ನಗರ, ಚಿಕ್ಕಮಗಳೂರು-577102

E-mail- dobcmchikkamagalore@gmail.com ☏ /Fax 08262-220922

ಸಂಖ್ಯೆ:ಹಿಂವಇ:ನೇಮಕಾತಿ:ಸಿಆರ್-37:2016-17 ದಿನಾಂಕ: 11.08.2017.

**-ಃ ತಿಳುವಳಿಕೆ ಪತ್ರ ಃ-**

**ವಿಷಯ:** ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗುವ ಬಗ್ಗೆ.

ಉಲ್ಲೇಖ: 1) ಈ ಕಛೇರಿ ಅಧಿಸೂಚನೆ ಸಂಖ್ಯೆ:ಹಿಂವಇ/ನೇಮಕಾತಿ/ಸಿಆರ್37/2016-17 ದಿನಾಂಕ: 20.10.2016

2) ಸರ್ಕಾರದ ಆದೇಶ ಸಂಖ್ಯೆ:ಹಿಂವಕ375/ಬಿಇಟಿ 2017 ದಿನಾಂಕ: 07.08.2017

<<<>>>

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಈ ಕಛೇರಿ ಅಧಿಸೂಚನೆಯ ಪ್ರಕಾರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಅಡುಗೆಯವರು/ಅಡುಗೆ ಸಹಾಯಕರ ಹುದ್ದೆಗೆ ಅರ್ಜಿ ಸಲ್ಲಿಸಿದ್ದು, ಆನ್‌ಲೈನ್ ಮೂಲಕ ಸಲ್ಲಿಸಿರುವ ದಾಖಲೆಗಳ ಪರಿಶೀಲನೆ ಪ್ರಕಾರ ನೀವು ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿರುತ್ತೀರಿ.

ಉಲ್ಲೇಖ (2)ರಲ್ಲಿನ ಸರ್ಕಾರದ ಆದೇಶದನುಸಾರ ನೀವು ಆನ್‌ಲೈನ್‌ನಲ್ಲಿ ಈಗಾಗಲೇ ನೇಮಕಾತಿ ಕುರಿತು ಅರ್ಜಿ ಸಲ್ಲಿಸುವಾಗ ಸಲ್ಲಿಸಿರುವ ಎಲ್ಲಾ ಮೂಲ ದಾಖಲೆಗಳನ್ನು ಪರಿಶೀಲಿಸಲು **ದಿನಾಂಕ: 21.08.2017 ರಂದು ಅಪರಾಹ್ನ 3.00 ಗಂಟೆಗೆ ಜಿಲ್ಲಾ ಪಂಚಾಯಿತಿ ಸಭಾಂಗಣ, ಕೆ.ಎಂ.ರಸ್ತೆ, ಚಿಕ್ಕಮಗಳೂರು** ಇಲ್ಲಿ ನೀವು ಕೆಳಕಂಡ ಮೂಲ ದಾಖಲೆಗಳೊಂದಿಗೆ ಪರಿಶೀಲನೆಗೆ ಖುದ್ದಾಗಿ ಹಾಜರಾಗಲು ತಿಳಿಸಿದೆ.

1) ಎಸ್.ಎಸ್.ಎಲ್.ಸಿ. ಅಂಕಪಟ್ಟಿ
2) ಜಾತಿ ಮತ್ತು ಆದಾಯ ದೃಢೀಕರಣ ಪತ್ರ
3) ಕನ್ನಡ ಮಾಧ್ಯಮ ದೃಢೀಕರಣ ಪತ್ರ (ಅನ್ವಯಿಸಿದಲ್ಲಿ)
4) ಗ್ರಾಮೀಣ ಅಭ್ಯರ್ಥಿ ದೃಢೀಕರಣ ಪತ್ರ (ಅನ್ವಯಿಸಿದಲ್ಲಿ)
5) ಯೋಜನಾ ನಿರಾಶ್ರಿತರು ದೃಢೀಕರಣ ಪತ್ರ (ಅನ್ವಯಿಸಿದಲ್ಲಿ)
6) ಅಂಗವಿಕಲತೆ ದೃಢೀಕರಣ ಪತ್ರ (ಅನ್ವಯಿಸಿದಲ್ಲಿ)
7) ಮಾಜಿ ಸೈನಿಕರ ದೃಢೀಕರಣ ಪತ್ರ (ಅನ್ವಯಿಸಿದಲ್ಲಿ)

ಜಿಲ್ಲಾ ಅಧಿಕಾರಿ,
ಹಾಗೂ ಸದಸ್ಯ ಕಾರ್ಯದರ್ಶಿ,
ಜಿಲ್ಲಾ ಮಟ್ಟದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ
ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ
ಅಡುಗೆಯವರು/ಅಡುಗೆ ಸಹಾಯಕರ ಹುದ್ದೆಗಳ
ನೇರ ನೇಮಕಾತಿ ಸಮಿತಿ
ಚಿಕ್ಕಮಗಳೂರು ಜಿಲ್ಲೆ.